MYSORE LEGISLATIVE ASSEMBLY

Thursday, 3rd March 1966.

The House met in the Assembly Chambers, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A.,B.L.) in the Chair.

STARRED QUESTIONS

(to which oral answers were given)

Establishment of Co-operative Rice Mills.

*Q.—133. Sri H. D. DEVEGOWDA (Holenarasipur).—

Will the Government be pleased to state :—

(*a*) the number of Co-operative Rice Mills established in the State together with the places where they have been established ;

(*b*) the amount invested by them in each of the Rice Mills by way of shares;

(*c*) the basis they have taken into consideration while investing share amount ;

(*d*) the amount of dividend or interest received so far from these rice mills in which they have invested share amount ?

A.—Sri K. PUTTASWAMY (Minister for Co-operation and Housing).—

(*a*) No. 74 Places : (*Vide* statement appended).

(*b*) *Vide* statement to the clause (*a*)

(*c*) The availability of adequate quantity of paddy in the area, the financial strength and organisational ability, together with the experience in processing and marketing of paddy by each societies.

(*d*) 22 Rice Mills have so far gone into production. Out of these only 18 rice mills have declared dividend of Rs. 32,636-62.

STATEMENT

Showing details of Rice Mills.

Sl. No.	Name of the society to which rice mill is allotted	Location of rice mill	Share capital sanctioned for rice mill
1	2	3	4
1	Raichur Taluk Agricultural Produce Marketing Society,	Co-operative Raichur.	Raichur	2,25,000
2	Sindhanur	do	Sindhanur...	Sindhanur	2,25,000
3	Bantwal	do	Bantwal ...	Bantwal	2,25,000
4	Honnavar	do	Honnavar ...	Honnavar	2,25,000
5	Belgaum	do	Belgaum ...	Belgaum	2,25,000
6	Khanapur	do	Khanapur ...	Nandgud	2,25,000
7	Dharwar District Purchase and Sale Union	...	Dharwar	2,25,000
8	Shiggaon Taluk Agricultural Produce Co-operative Marketing Society,	Bankapur ...	Bankapur	2,25,000
9	Hirekerur	do	Hirekerur	2,25,000
10	Harihar	do	Harihar ...	Harihar	2,25,000
11	Kanakapur	do	Kanakapur	Kanakapur	2,25,000
12	Kampli	do	Kampli ...	Kampli	2,25,000
13	Shiraguppa	do	Shiraguppa	Shiraguppa	2,25,000
14	Bellary	do	...	Bellary	2,25,000
15	Hospet	do	...	Hospet	2,25,000

16	Mulbagal	do	...	Mulbagal	2,25,000
17	Chintamani	do	...	Chintamani	2,25,000
18	Gouribidanur	do	...	Gouribidanur	2,25,000
19	Mysore	do	...	Mysore	2,25,000
20	H.D. Kote	do	...	H.D. Kote	2,25,000
21	Chamarajanagar	do	...	Chamarajanagar	2,25,000
22	Yelandur	do	...	Yelandur	2,25,000
23	Kollegal	do	...	Kollegal	2,25,000
24	Gonikoppal	do	...	Gonikoppal	2,25,000
25	Kushalnagar	do	...	Kushalanagar	2,25,000
26	Sorab	do	...	Sorab	2,25,000
27	Thirthahalli	do	...	Thirthahalli	2,25,000
28	Shimoga	do	...	Shimoga	2,25,000
29	Bhadravati	do	...	Bhadravati	2,25,000
30	Honnali	do	...	Honnali	2,25,000
31	Coondapur	do	...	Coondapur	2,25,000
32	Alur	do	...	Alur	2,25,000
33	Davanagere Agricultural Prodssing and Industrial and Commercial Co-operative Soceiety Ltd.		...	Davanagere	2,25,000
34	Srimangala A.P.C.M.S.C., Srimangala		...	Srimangala	2,25,000
35	Channarayapatna T.A.P.C.M.S.		...	Channarayapatna	2,25,000
36	Koppal	do	...	Koppal	2,25,000
37	Gundlapet	T.A.P.C.M.S.	...	Gundlapet	2,25,000
38	Challakere	do	...	Challakere	2,25,000
39	Kittur Rani Channamma Co-operative Rice Mills Limited, Kittur.			Kittur	2,25,000
40	Kumta Arecanut Co-operative Sale Society Limited, Kumta.			Kumta	2,25,000

1	2		3	4
41	Chikmagalur	T.A.P.C.M.S. ...	Chickmagalur	2,25,000
42	Shikaripur	do ...	Shikaripur	50,000
43	Malavalli	do ...	Malavalli	70,000
44	Srirangapatna	do ...	Srirangapatna	70,000
45	Murnad	A.P.C.M.S. Ltd. ...	Murnad	30,000
46	Ryots Co-operative Processing Society Limited, Madhugiri.		Madhugiri	50,000
47	Ponnampet	A.P.C.M.S. ...	Ponnampet	40,000
48	K. R. Nagar	T.A.P.C.M.S. ...	K. R. Nagar	50,000
49	Mangalore	do ...	Mangalore	20,000
50	Maddur	do ...	Maddur	50,000
51	Pandavapura	do ...	Pandavapura	70,000
52	Hunsur	do ...	Hunsur	50,000
53	Channarayapatna	do ...	Channarayapatna	60,000
54	Haliyal	do ...	Haliyal	50,000
55	Hangal	do ...	Akkialur	27,500
56	Mundgod	do ...	Mundgod	37,500
57	Gangavati	A P.C.M.S. ...	Gangavati	20,000
58	Nanjangud	T.A.P.C.M.S. ...	Nanjangud	60,000
59	Hassan	do ...	Hassan	65,000
60	K. R. Pet	do ...	K. R. Pet	40,000
61	Mudigere	do ...	Mudigere	20,000
62	Tarikere	do ...	Tarikere	20,000
63	Kunigal	do ...	Kunigal	1,00,000
64	Sirsi Totagars Co-operative Sale Society Limited		Sirsi	1,50.000

65	Holenarasipur	T.A.P.C.M.S.	...	Holenarasipur	1,50,000
66	Hiriyur	do	...	Hiriyur	1,40,000
67	Kalaghatgi	do	...	Kalaghatgi	1,30,000
68	Gangavati	do		Gangavathi	1,20,000
69	Belur	do	...	Belur	1,20,000
70	Periyapatna	do	...	Periyapatna	1,10,000
71	T. Narasipur	do	...	T. Narasipur	1,20,000
72	Bangarpet	do	...	Bangarpet	1,30,000
73	Sakleshpur	do	...	Sakleshpur	1,30,000
74	(a) Mandya Ryots Agricultural Produce Co-operative Marketing Society.			Mandya (Modern Rice Mill)	5,25,000
	(b) Paddy processing unit		...		1,00,000
				Total ...	1,22,00,000

ಶ್ರೀ ಎಚ್. ಡಿ. ದೇವೇ ಗೌಡ.—ಈ 74 ಅಕ್ಕಿ ಗಿರಣಿಗಳಲ್ಲಿ ಎರಡನೆಯ ಯೋಜನೆಯಲ್ಲಿ ಮತ್ತು ಮೂರನೆಯ ಯೋಜನೆಯಲ್ಲಿ ಆದದ್ದು ಎಷ್ಟು ಎಂದು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ಮಾಹಿತಿಯನ್ನು ಈಗ ಹೇಳಲಾರೆ. ಹೋದ ವರ್ಷ 41ಕ್ಕೆ ಅನುಮತಿಯನ್ನು ಕೊಟ್ಟಿದೆ. ಉಳಿದುವೆಲ್ಲ ಹಿಂದೆ ಆದವು.

ಶ್ರೀ ಎಚ್. ಡಿ. ದೇವೇಗೌಡ. —ಉಳಿದ 34 ಯಾವಾಗ ಪ್ರಾರಂಭವಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಆ ಮಾಹಿತಿ ಈಗ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ. —ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ತರಿಸಿಕೊಡಬಹುದು.

ಶ್ರೀ ಸಿದ್ದಯ್ಯ ಕಾಶಿಮಠ,—41 ಗಿರಣಿಗಳಿಗೆ ಸರ್ಕಾರದ ವತಿಯಿಂದ 2,25,000 ರೂಪಾಯಿ ಷೇರು ಹಣವನ್ನು ಮುಂಜೂರು ಮಾಡಿ ಬಾಕಿ ಗಿರಣಿಗಳಿಗೆ ಕಡಿಮೆ ಕೊಡಲಿಕ್ಕೆ ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ರಾಜ್ಯದಿಂದ ಕೊಡುತ್ತಿದ್ದೆವು. ಹೋದ ವರ್ಷ ನ್ಯಾಷನಲ್ ಕೋ-ಆಪರೇಷನ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಹಣ ಬಂದುದರಿಂದ ಹೆಚ್ಚಿಗೆ 41 ಅಕ್ಕಿ ಗಿರಣಿಗಳಿಗೆ ಕೊಟ್ಟಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ಪ್ರಾರಂಭ ಮಾಡಿರುವ 22 ಗಿರಣಿಗಳಲ್ಲಿ 18 ಗಿರಣಿಗಳು 32,636 ರೂಪಾಯಿ ಲಾಭ ಘೋಷಿಸಿದೆ ಎಂದು ಹೇಳಿದ್ದಾರೆ. ಉಳಿದ ನಾಲ್ಕು ಗಿರಣಿಗಳ ಪರಿಸ್ಥಿತಿ ಏನಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ. —ಅವು ನಡೆಯುತ್ತಿವೆ. ಲಾಭವನ್ನು ಘೋಷಿಸಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಒಟ್ಟು ಎಲ್ಲಾ ಗಿರಣಿಗಳಿಗೂ ಕೊಟ್ಟಿರುವುದು ಒಂದು ಲಕ್ಷ 22 ಸಾವಿರ ರೂಪಾಯಿ ? ಇದಕ್ಕೆ ಸರ್ಕಾರಕ್ಕೆ ತಗಲತಕ್ಕ ಬಡ್ಡಿ ಎಷ್ಟು ಯಾವ ಮೂಲಕ ಹಣವನ್ನು ತರಿಸಿಕೊಟ್ಟಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನಾಗಲೇ ಹೇಳಿದಂತೆ ಹೋದವರ್ಷ 41 ಗಿರಣಿಗಳಿಗೆ ಆಗುವ ಹಣವನ್ನು ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಕೊಟ್ಟಿದ್ದಾರೆ. ಅದಕ್ಕೆ ಸರ್ಕಾರ ಬಡ್ಡಿ ಕೊಡುತ್ತದೆ.

ಶ್ರೀ ಬಿ. ಜೆ. ಲಿಂಗೇಗೌಡ.—ರಾಜ್ಯದಲ್ಲಿ ಸ್ಥಾಪಿಸಿರುವ ಅಕ್ಕಿಗಿರಣಿಗಳ ಪೈಕಿ ಚನ್ನಪಟ್ಟಣದಲ್ಲಿ ಸ್ಥಾಪನೆಯಾಗಿರುವ ಗಿರಣಿ ವಿಷಯ ಇಲ್ಲ. ಪರಿಶಿಷ್ಟದಲ್ಲಿ 35 ಚೆನ್ನರಾಯಪಟ್ಟಣ, ಎಂದು ಇದೆ. 53 ನಹ ಚನ್ನಪಟ್ಟಣ, ಎಂದು ಇದೆ. ಚನ್ನಪಟ್ಟಣ ಇದರಲ್ಲಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ 53ನೆಯದು ಚನ್ನಪಟ್ಟಣ.

ಶ್ರೀ ಎಚ್. ಡಿ. ದೇವೇಗೌಡ.—ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಿಂದ 41 ಗಿರಣಿಗಳಿಗೆ ಹಣ ಕೊಡಲಾಗಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಕೊಟ್ಟಿರುವ ಹಣವೆಷ್ಟು, ಅದಕ್ಕೆ ಸರ್ಕಾರ ಕೊಡುವ ಬಡ್ಡಿಯ ದರವೆಷ್ಟು ?

ಶ್ರೀ ಕೆ. ಪುಟ್ಟಸ್ವಾಮಿ.—ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಬಹಳ ಸುಲಭ ದರದಲ್ಲಿ ಬಡ್ಡಿಯನ್ನು ಕೊಡುತ್ತೇವೆ. ಬಡ್ಡಿ ದರವೆಷ್ಟು ಎನ್ನುವ ವಿವರ ಈಗ ನನ್ನ ಹತ್ತಿರ ಇಲ್ಲ. ಆ ಹಣವನ್ನು ನಾವು ಸಹಕಾರ ಸಂಘಗಳಿಗೆ ಕೊಟ್ಟಿದ್ದೇವೆ. ಆ ಹಣ ಇವತ್ತಿಗೂ ಕೂಡ ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಜಮಾ ಆಗಿದೆ. ಇನ್ನೂ ಖರ್ಚಾಗಿಲ್ಲ. ಅದಕ್ಕೂ ಬಡ್ಡಿ ಬರುತ್ತಿದೆ. ಇನ್ನೂ ರೈಸ್‌ಮಿಲ್ಲುಗಳನ್ನು ಕೊಂಡುಕೊಂಡಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ.—ಸರ್ಕಾರದವರು ಹೆಚ್ಚು ಹೆಚ್ಚಾಗಿ ಬಂಡವಾಳವನ್ನು ಹಾಕಿ ಅಕ್ಕಿ ಗಿರಣಿಗಳನ್ನು ರಾಷ್ಟ್ರೀಕರಣ ಮಾಡಿ ಅವುಗಳನ್ನು ಸರ್ಕಾರದವರೇ ನಡೆಸುತ್ತಾರೆಯೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ದಿಸೆಯಲ್ಲಿ ಇಡುತ್ತಿರುವುದೇ ಈ ಹೆಜ್ಜೆ. ಇದೇ ರಾಷ್ಟ್ರೀಕರಣ.

ಶ್ರೀ ಬಿ. ಬೈರಪ್ಪಾಜಿ.—ಇನ್ನೂ ಅನೇಕ ಕಡೆ ಸಹಕಾರದ ತತ್ವದ ಮೇಲೆ ಅಕ್ಕಿ ಗಿರಣಿಗಳನ್ನು ಪ್ರಾರಂಭ ಮಾಡಬೇಕೆಂದಿದ್ದೀರಾ ? ನಾಲ್ಕನೆಯ ಯೋಜನೆಯಲ್ಲಿ ಅಂಥ ಗಿರಣಿಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಆಲೋಚನೆ ಮಾಡಬೇಕು, ಸ್ವಾಮಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1,22,00,000 ರೂಪಾಯಿ ಬಂಡವಾಳವನ್ನು ಇದರಲ್ಲಿ ಹೂಡಿರುವುದಕ್ಕೆ ಸರ್ಕಾರದವರ ಘನವಾದ ಮೂಲ ಉದ್ದೇಶವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ಕೋಟಿ 22 ಲಕ್ಷ ರೂಪಾಯಿ ಬಂಡವಾಳ ಹೂಡಿದರೂ ಇದರಲ್ಲಿ 90 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಇನ್ನೂ ಖರ್ಚೇ ಆಗಿಲ್ಲ. ಆಯಾ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡದೆ ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿಯೇ ಇದೆ. ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿದೆ. ಆ ಸಮಿತಿಯವರು ಯಾವ ತರಹದ ಮಿಲ್ ತೆಗೆದುಕೊಳ್ಳಬೇಕು, ಅದರ ಕೆಪಾಸಿಟಿ ಎಷ್ಟಿರಬೇಕು, ಪ್ಲಾನ್ ವಗೈರೆ ಏನಿರಬೇಕು ಎಂದು ಎಲ್ಲ ವಿಷಯಗಳನ್ನೂ ಪರ್ಯಾಲೋಚನೆ ಮಾಡುತ್ತಾರೆ. ಅದಾದ ಮೇಲೆ 41 ಗಿರಣಿಗಳಿಗೆ 92 ಲಕ್ಷ ರೂಪಾಯಿ ಹೋದರೆ ಉಳಿದದ್ದು ಕೇವಲ 30 ಲಕ್ಷ ರೂಪಾಯಿ. ಇದರಲ್ಲಿ ಕೆಲವು ಗಿರಣಿಗಳು ಈಗಾಗಲೇ ಕೆಲಸ ಮಾಡುತ್ತಿವೆ. ಅವು ಡಿವಿಡೆಂಡ್ ಕೊಡುತ್ತಿವೆ. ಈ ಗಿರಣಿಗಳನ್ನು ಸ್ಥಾಪನೆ ಮಾಡುವ ಉದ್ದೇಶವೇನೆಂದರೆ ವ್ಯಾಪಾರಸ್ಥರ ಕೈಯಲ್ಲಿ ಎಲ್ಲ ಅಕ್ಕಿ ಗಿರಣಿಗಳೂ ಇದ್ದರೆ ದೇಶದಲ್ಲಿ ಆಹಾರದ ಲಭ್ಯತೆ ಬಂದಾಗ ಸರಿಯಾದ ರೀತಿಯಲ್ಲಿ ಆ ಗಿರಣಿಗಳ ಮೇಲೆ ಹತೋಟಿ ಇರುವುದಿಲ್ಲ. ಸಹಕಾರ ಸಂಘಗಳು ನಡೆಸುತ್ತಿದ್ದರೆ ಅವು ಸರ್ಕಾರದ ಪ್ರಭಾವಕ್ಕೆ ಒಳಗಾಗಿ ಸರಿಯಾದ ರೀತಿಯಲ್ಲಿ ಕೆಲಸಮಾಡಿ ಜನರಿಗೆ ಒಳ್ಳೆಯ ಅಕ್ಕಿಯನ್ನು ಒದಗಿಸಿಕೊಡುವುದು ಅದರಿಂದ ಸಾಧ್ಯವಾದೀತು ಎಂದು ಮಾಡಿದ್ದೇವೆ.

ಶ್ರೀ ಜಿ. ರಾಮೇ ಗೌಡ.—ಈ ಗಿರಣಿಗಳಲ್ಲಿ ಕೆಲವು ಲಾಭದಾಯಕವಾಗಿ ನಡೆಸಮಾಡದೆ ಇರುವುದರಿಂದ ಸರ್ಕಾರದವರು ಇದನ್ನು ಕೂಲಂಕಷವಾಗಿ ಆಲೋಚನೆಮಾಡಿ ಇವು ಲಾಭದಾಯಕವಾಗಿ ಕೆಲಸಮಾಡುವುದಕ್ಕೆ ಏನಾದರೂ ಪ್ರಯತ್ನಮಾಡುವಂತೆ ತಕ್ಕ ನಲಹೆಗಳನ್ನು ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ನಡೆಯುತ್ತಿರುವ ಅಕ್ಕಿ ಗಿರಣಿಗಳಲ್ಲಿ ಹಲವು ಅಕ್ಕಿ ಗಿರಣಿಗಳು ಚೆನ್ನಾಗಿ ಲಾಭದಾಯಕವಾಗಿ ಕೆಲಸ ಮಾಡುತ್ತಿರುವುದರಿಂದ ಮಾನ್ಯ ಸದಸ್ಯರು ಅವುಗಳಲ್ಲಿ ಕೆಲವು ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲವೆಂದು ಹೇಳಿದುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಅಕ್ಕಿ ಗಿರಣಿಗಳನ್ನು ಖಾಸಗೀಯವರಿಗೆ ಕೊಟ್ಟರೆ ಅಲ್ಲಿ ಅಷ್ಟು ಸಮರ್ಪಕವಾಗಿ ಕೆಲಸ ನಡೆಯುವುದಿಲ್ಲವೆಂದು ಹೇಳುತ್ತಾರೆ. ಅಂದಮೇಲೆ ಇವನ್ನು ಸಹಕಾರ ಸಂಘಗಳಿಗೆ ಕೊಡುವುದರಿಂದ ಸರ್ಕಾರದ ಹತೋಟಿ ಏನಿದೆ ? ಅದ್ದರಿಂದ ಕೆಲವನ್ನು ಖಾಸಗಿಯವರಿಗೆ ಕೊಟ್ಟು ಮತ್ತೆ ಕೆಲವನ್ನು ಸಹಕಾರ ಸಂಘಗಳಿಗೆ ಕೊಟ್ಟು ಯಾವುದು ಕಂಪಿಟಿಟಿವ್ ಆಗಿ ಕೆಲಸಮಾಡುತ್ತವೆಂದು ನೋಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಖಾಸಗಿಯವರಿಗೆ ನಾವು ಕೊಡುವ ಪ್ರಶ್ನೆ ಬರುವುದಿಲ್ಲ. ಖಾಸಗಿಯವರು ತಮ್ಮ ಸ್ವಂತ ಬಂಡವಾಳ ಹಾಕಿ ಅಕ್ಕಿ ಗಿರಣಿಗಳನ್ನು ನಡೆಸುತ್ತಾರೆ. ಸರ್ಕಾರದವರು ಕೆಲವು ಸಹಕಾರಸಂಘಗಳಿಗೆ ಕೊಟ್ಟಿದ್ದಾರೆ. ಇನ್ನು ಸರ್ಕಾರದ ಹತೋಟಿ ಅವುಗಳಮೇಲೆ ಏನು ಅಂದರೆ, ಅಲ್ಲಿರತಕ್ಕ ಸಾರ್ವಜನಿಕ ನೌಕರರು ಆ ಸಹಕಾರ ಸಂಘಗಳ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಹಾರ ನಡೆಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡುವುದು ಅದಕ್ಕಾಗಿ ನಮ್ಮ ಪ್ರತಿನಿಧಿಯೂ ಕೂಡ ಆ ಸಹಕಾರ ಸಂಘಗಳಲ್ಲಿರುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಉತ್ತರದಲ್ಲಿ ಅಕ್ಕಿ ಗಿರಣಿಗಳನ್ನು ಸಹಕಾರ ಸಂಘಗಳಿಂದ ತೆರವಿಸ್ತೀವೆ. ಅವುಗಳ ಪೈಕಿ 22 ಅಕ್ಕಿಗಿರಣಿಗಳು ಚೆನ್ನಾಗಿ ಕೆಲಸಮಾಡುತ್ತಿವೆಯೆಂದು ಹೇಳಿದೆ. ಹಿಂದೆ ಹಳೆಯ ಕಾಲದಲ್ಲಿದ್ದಂತಹ ಅಕ್ಕಿ ಗಿರಣಿಗಳಿಂದ ಬರುತ್ತಿದ್ದಂಥ ಅಕ್ಕಿ ಪರ್ಸಂಟೇಜ್ ಎಷ್ಟು ? ಈಗ ಸಹಕಾರ ಸಂಘಗಳಿಗಾಗಿ ಕೊಟ್ಟಿರುವ ಹೊರಗಡೆಯಿಂದ ತರಿಸಿ ಉಪಯೋಗಿಸುತ್ತಿರುವ ಅಕ್ಕಿ ಗಿರಣಿಗಳಿಂದ ಬರತಕ್ಕ ಅಕ್ಕಿ ಪರ್ಸಂಟೇಜ್ ಎಷ್ಟು ಎಂಬುದನ್ನು ಸರ್ಕಾರದವರು ತಿಳಿಸುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಯಾವುದಾದರೂ ಒಂದು ನಿದರ್ಶನವೊಂದಿಗೆ ಹೋಲಿಕೆಮಾಡಿ ಹೇಳಿದರೆ ಉತ್ತರ ಹೇಳಬಹುದು. ಹಳೆಯ ಕಾಲದ ಅಕ್ಕಿ ಗಿರಣಿಗಳು ಸಾವಿರಾರು ಇವೆ. ಹೊಸದಾಗಿ ಬಂದಿರತಕ್ಕ ಅಕ್ಕಿಗಿರಣಿಗಳ ಸಂಖ್ಯೆಯನ್ನು ಉತ್ತರದಲ್ಲಿ ಕೊಟ್ಟಿದೆ. ಆದರೆ ಈಗ ಅವುಗಳಿಗೆ ಹೋಲಿಸಿ ಅಂಕಿ ಅಂಶಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಸನದಲ್ಲಿ ಎರಡು ವರ್ಷಗಳ ಹಿಂದೆಯೇ ಗಿರಣಿ ಕೆಲಸ ಪ್ರಾರಂಭವಾಗಿದ್ದರೂ ಅದು ಈಗ ಕೆಲಸ ಮಾಡುವಸ್ಥಿತಿಯಲ್ಲಿ ಇಲ್ಲ. ಆದರಿಂದ ಇವತ್ತು ಅಲ್ಲಿ ಬತ್ತ ವಿಲ್ಲದ ಅಕ್ಕಿ ಗಿರಣಿಗಳನ್ನು ಬೇರೆಯವರಿಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಸರ್ಕಾರದವರು ವಿಚಾರವಿಲ್ಲದೆ ಈ ರೀತಿ ಮಾಡುತ್ತಿರುವುದು ಸರಿಯೇ ? ಈ 74 ಗಿರಣಿಗಳಿಗೆ ಸರ್ಕಾರದವರು ಹಣ ಕೊಟ್ಟಿರುವುದನ್ನು ತನಿಖೆಮಾಡಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಇಂಡಿವಿಜುಯಲ್ ಕೇಸ್ ಆಗುತ್ತದೆ. ಹಾಸನದ ಸುತ್ತಲೂ ಬತ್ತ ಬೆಳೆಯುತ್ತಾರೆ. ಅಲ್ಲಿಗೆ ಬತ್ತ ಬಾರದೇ ಇರುವುದರಿಂದ ಗಿರಣಿ ಚೆನ್ನಾಗಿ ನಡೆಯುತ್ತಾ ಇಲ್ಲವೆಂದು ಹೇಳಿದರೆ ಅದೇನೋ ಸರಿ ಕಾರಣದಿಂದಿರಬಹುದು. ಅದನ್ನು ವಿಚಾರಮಾಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—39ನೇ ಐಟಂ ಕಿತ್ತೂರು ರಾಣಿ ಚೆನ್ನಮ್ಮ ಸಹಕಾರಿ ಅಕ್ಕಿ ಗಿರಿಣಿಗೆ ಸರ್ಕಾರದವರು 225 ಸಾವಿರ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ ಎಂಬುದಾಗಿ ಪರಿಶಿಷ್ಟದಲ್ಲಿ ಹೇಳಿದೆ. ಇದು ಚೆನ್ನಾಗಿ ಕೆಲಸಮಾಡಿದ್ದರೆ ಈಗ ಎಷ್ಟು ಡಿವಿಡೆಂಡ್ ಡಿಕ್ಲೇರ್ ಮಾಡಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮೊದಲೇ ಹೇಳಿದ್ದೇನೆ. ಪರಿಶಿಷ್ಟದ ಮೊದಲನೆ ಕ್ರಮ ಸಂಖ್ಯೆಯಿಂದ 41ನೇ ಕ್ರಮ ಸಂಖ್ಯೆಯವರೆಗೆ ಇರತಕ್ಕ ಅಕ್ಕಿಗಿರಿಣಿಗಳು ಇನ್ನೂ ಸ್ಥಾಪನೆಯಾಗಿಲ್ಲ.

Transport Charges of Jowar paid by the T. A. P. M. C. S. Ltd., Channapatna.

*Q.—206. Sri B. J. LINGE GOWDA (Channapatna).—

Will the Government be pleased to state :—

(*a*) the rate of transport charges paid by the Taluk Agricultural Produce Marketing Co-operative Society Ltd, Channapatna on the transport of 48 tons of Jowar from Bijapur to Channapatna during the month of September 1965 ;

(*b*) the reasons for payment of exhorbitant transport charges ?

A.—Sri K. PUTTASWAMY (Minister for Co-operation and Housing).—

(*a*) No jowar from Bijapur has been transported by the T. A. P. M. C. S. Ltd., Channapatna during the month of September 1965.

(*b*) Does not arise in view of reply to clause (*a*) above

ಶ್ರೀ ಬಿ. ಜೆ. ಲಿಂಗೇಗೌಡ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಈ ತಾಲ್ಲೂಕು ಸಹಕಾರ ಸಂಘದವರು ಬಿಜಾಪುರದಿಂದ ಜೋಳವನ್ನೇನೂ ಸಾಗಿಸಿರುವುದಿಲ್ಲವೆಂದು ಹೇಳಿದೆ. ಆದರೆ ಅದೇ ತಿಂಗಳಿನಲ್ಲಿ 48 ಟನ್ ಜೋಳವನ್ನು ಬಿಜಾಪುರದ ಅಕ್ಕ ಪಕ್ಕದ ತಾಲ್ಲೂಕುಗಳಿಂದ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಬಿಜಾಪುರದಲ್ಲಿರತಕ್ಕ ಸಿಂಧಗಿ ತಾಲ್ಲೂಕಿನ ಅಲಮೇಲು ಗ್ರಾಮದಿಂದ ತಂದಿದ್ದಾರೆ.

ಶ್ರೀ ಬಿ. ಜೆ. ಲಿಂಗೇ ಗೌಡ.—ಒಂದು ಕ್ವಿಂಟಾಲಿಗೆ ಸಾಗಾಣಿಕೆ ಖರ್ಚು ಎಷ್ಟು ಎಂಬುದಾಗಿ ಕೊಟ್ಟಿದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—8 ರೂಪಾಯಿ 75 ಪೈಸೆ.

ಶ್ರೀ ಬಿ. ಜೆ. ಲಿಂಗೇಗೌಡ.—ಒಂದು ಕ್ವಿಂಟಾಲಿಗೆ 11½ರೂಪಾಯಿಗಳು ಕೊಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಸರ್ಕಾರದ ಪರವಾಗಿ ಉತ್ತರ ಹೇಳುತ್ತಿದ್ದೇನೆ. ಒಂದು ಕ್ವಿಂಟಾಲಿಗೆ 8ರೂಪಾಯಿ 75 ಪೈಸೆಗಳಂತೆ ಕೊಟ್ಟಿದ್ದಾರೆ. ಮಾನ್ಯಸದಸ್ಯರು ಹೊಸದಾಗಿ ಅವಾಹಿತಿ ಯನ್ನು ಈಗ ಕೊಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಂಸ್ಥೆಗಳಲ್ಲಿ ಸರ್ಕಾರದ ಪರವಾಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ಇರುವುದರಿಂದ ಸಾಗಾಣಿಕೆಯ ದರವನ್ನು ನಿಗದಿಮಾಡುವ ಕಾಲದಲ್ಲಿ ಅನುಸರಿಸುವ ಕ್ರಮಗಳಾವುವು ?

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಒಂದು ಅಪ್ರೂವ್ಡ್ ರೇಟ್ ಇದೆ. ಆ ದರದ ಪ್ರಕಾರ ಮೊದಲನೆಯ ಮೈಲಿಗೆ ಕ್ವಿಂಟಾಲಿಗೆ 3 ಪೈಸೆಯೆಂತಲೂ, ಆಮೇಲೆ ಹೆಚ್ಚುವರಿಯಾದರೆ ಕ್ವಿಂಟಾಲಿಗೆ 2 ಪೈಸೆಯೆಂತಲೂ ನಿಗದಿಮಾಡಲಾಗಿದೆ.